ಎದೆಹಾಲು ಕುಡಿಯುತ್ತಿದ್ದೆನಂತೆ. ಆಗ ಅತ್ತೆ ಅವರ ಮಗುವಿನ ಜೊತೆಗೆ ನನಗೂ ಅವರ ಎದೆಹಾಲು ಕುಡಿಸುತ್ತಿದ್ದರಂತೆ. 'ಅವನು ಕುಡಿಯಲಿ, ಅವನು ಕುಡಿಯಲಿ' ಎಂದು ನನಗೆ ಕುಡಿಸುತ್ತಿದ್ದರಂತೆ. 'ಯಾಕೆ ಹಾಗೆ ಮಾಡ್ತೀಯಾ? ನಿನ್ನ ಮಗುವಿಗೆ ಕುಡಿಸು' ಎಂದು ಅಪ್ಪಾಜಿ ಬೈಯುತ್ತಿದ್ದರಂತೆ. ಆದರೆ, ನಾಗಮ್ಮ, 'ನೀನು ಸಿನಿಮಾ ಮಾಡು. ಮನೆ ವ್ಯವಹಾರ ನಮಗೆ ಬಿಟ್ಟುಬಿಡು' ಎಂದು ಅವರಿಗೆ ಹೇಳಿ ನಮ್ಮನ್ನೆಲ್ಲ ನೋಡಿಕೊಳ್ಳುತ್ತಿದ್ದರಂತೆ.

ಎಂಥ ತಾಯಿ ನೋಡಿ ಅವರು ! ಇವತ್ತಿಗೂ ಅವರು ನನ್ನ ಜೊತೆಗೆ ಇದ್ದಾರೆ. ಮೊನ್ನೆ ನನ್ನ 'ಅಮ್ಮನ ಮನೆ' ಸಿನಿಮಾ ಟೀಸರ್ ಅವರಿಂದಲೇ ಬಿಡುಗಡೆ ಮಾಡಿಸಿದೆ. ನನ್ನನ್ನು ಕೊನೆಯವರೆಗೂ ಅವರೇ ಸಾಕಿದರು. ಈಗಲೂ ಸಾಕುತ್ತಿದ್ದಾರೆ. ಅವರನ್ನು ನೋಡಿದಾಗೆಲ್ಲ ನಮ್ಮಮ್ಮ ಎಲ್ಲಿಗೂ ಹೋಗಲಿಲ್ಲ; ಇಲ್ಲಿಯೇ, ಇವರಲ್ಲಿಯೇ ಇದ್ದಾರೆ ಅನಿಸುತ್ತದೆ.

## ಅಮ್ಮನ ನೆನಪು

ನಾನು ಒಂಬತ್ತನೇ ಕ್ಲಾಸಿನಲ್ಲಿ ಓದುವವರೆಗೂ ಅಮ್ಮನ ಸೆರಗನ್ನು ಹಿಡಿದುಕೊಂಡೇ ಓಡಾಡುತ್ತಿದ್ದೆ. ಅವರು ಊರಿಗೆ ಹೋದಾಗ 'ಯಾವಾಗ ಬರ್ತೀಯಾ?' ಎಂದು ಅಳುತ್ತಿದ್ದೆ. 'ನೀನು ಬರುವವರೆಗೆ ಊಟ ಮಾಡಲ್ಲ' ಎಂದು ಹಟ ಮಾಡುತ್ತಿದ್ದೆ. ನಂತರ ನಾನು ಬೆಳೆದು ನಟನಾಗಿ ಹಲವು ಸಿನಿಮಾಗಳನ್ನು ಮಾಡಿದ ಮೇಲೆ, ಒಂದು ಹಂತದಲ್ಲಿ ನನ್ನನ್ನು ವಜ್ರೇಶ್ವರಿ ಕಂಬೈನ್ಸ್‌ಗೆ ತಂದು ಕೂರಿಸಿದ್ದು ಅವರೇ. ನಿರ್ಮಾಣ ಮತ್ತು ವಿತರಣೆಯ ಕೆಲಸವನ್ನು ಹೇಳಿಕೊಟ್ಟರು.

ಅವರ ಬದುಕೇ ಒಂದು ಸಾಹಸಗಾಥೆ. ಆ ಕಾಲದಲ್ಲಿ ಸಿನಿಮಾ ಎಂದರೇ ಭಯ ಎಲ್ಲರಿಗೂ. ಅಂಥ ಸಂದರ್ಭದಲ್ಲಿ ಒಬ್ಬಳು ಹೆಣ್ಣುಮಗಳು ಸಿನಿಮಾರಂಗಕ್ಕೆ ಬಂದು ಇಲ್ಲಿ ಬೆರೆತು, ನಿರ್ಮಾಪಕಿಯಾಗಿ, 95 ಸಿನಿಮಾ ನಿರ್ಮಾಣ ಮಾಡುವುದು ಸಣ್ಣ ಸಾಧನೆಯೇ? ಇದನ್ನು ಅಮ್ಮ ಮಾಡಿದರು. ಬಹುಶಃ ಪ್ರಪಂಚದ ಯಾವ ಹೆಣ್ಣೂ ಇಷ್ಟೊಂದು ಸಿನಿಮಾ ನಿರ್ಮಾಣ ಮಾಡಿರಲಿಕ್ಕಿಲ್ಲ. ಗಂಡನ ಬೆನ್ನೆಲುಬಾಗಿ ನಿಂತು, ಮೂರು ಮಕ್ಕಳನ್ನು ಸಿನಿಮಾಗೆ ಸೇರಿಸಿ, ನಂತರ ಮೊಮ್ಮಕ್ಕಳೂ ಸಿನಿಮಾರಂಗಕ್ಕೆ ಬಂದಿದ್ದನ್ನು ನೋಡಿ ಹೋದರು ಅವರು. ಒಂದು ಸಂಸ್ಥೆಯನ್ನು ಬುಡಸಮೇತ ಕಟ್ಟಿ, ಬೆಳೆಸಿ, ಹಣ್ಣುಕೊಡುವ ಮರವನ್ನಾಗಿ ರೂಪಿಸಿ ಹೋದವರು ಅವರು. ನಾವೀಗ ಅವರು ಬೆಳೆಸಿದ ಮರದ ಹಣ್ಣು ತಿನ್ನುತ್ತಿದ್ದೇವಷ್ಟೆ.

ಅವರ ಜೀವನಚಕ್ರ ನೋಡಿ. ಅವರಿಗೆ ಎರಡು ತಿಂಗಳಾಗಿದ್ದಾಗ, ನನ್ನ ತಾತ ಹೋಗಿ 'ಈ ಹುಡುಗಿಯೇ ನಮ್ಮನೆ ಸೊಸೆಯಾಗಿ ಬರಬೇಕು' ಎಂದು ನಿಕ್ಕಿ ಮಾಡುತ್ತಾರೆ. ಈವತ್ತು ಅದ್ಭುತ ನೋಡಿ, ಅಪ್ಪಾಜಿ ಮತ್ತು ಅಮ್ಮ ಇಬ್ಬರೂ ಒಂದೇ ಮಣ್ಣಿನಲ್ಲಿ ಹೋಗಿ ಮಲಗಿದ್ದಾರೆ. ಬದುಕಿನುದ್ದಕ್ಕೂ ಪರಸ್ಪರ ಒಬ್ಬರಿಗೊಬ್ಬರು ಬೆಂಬಲವಾಗಿ ನಿಂತರು. ನಂತರ ಅಪ್ಪಾಜಿ ಅವರನ್ನು ಕಳೆದುಕೊಂಡು ಅಮ್ಮ ಹತ್ತು ವರ್ಷ ಬದುಕಿದರು. ಕ್ಯಾನ್ಸರ್ ಜೊತೆಗೆ ಹೊಡೆದಾಡಿಕೊಂಡು ಕುಟುಂಬವನ್ನು ಸಂಭಾಳಿಸಿದರು. ಮಕ್ಕಳಿಗೆಲ್ಲ ಒಂದು ನೆಲೆ ಮಾಡಿದರು. ಇಷ್ಟೆಲ್ಲ ಸಾಧನೆ ಮಾಡಿಯೂ, 'ನಾನೇನೂ ಮಾಡಿಲ್ಲ, ನನಗೇನೂ ಗೊತ್ತಿಲ್ಲ' ಎನ್ನುತ್ತಲೇ ತಂದೆಯ ಪಕ್ಕದಲ್ಲಿಯೇ ಹೋಗಿ ಮಲಗಿದ್ದಾರೆ. ತೊಟ್ಟಿಲಿಂದ ಹಿಡಿದು ಸಮಾಧಿಯವರೆಗೂ ಒಟ್ಟಿಗೇ ಇರುವ ದಾಂಪತ್ಯ ಅವರದ್ದು.

## ಪತ್ನಿಯಲ್ಲಿ ತಾಯ್ತನದ ಬಿಂಬಗಳು

ಅಮ್ಮನ ನಂತರ ನನ್ನ ಬದುಕಿನಲ್ಲಿ ಇನ್ನೊಬ್ಬಳು ತಾಯಿ ಬಂದರು.

ಆರು ವರ್ಷಗಳ ಹಿಂದೆ ನನಗೆ ಸ್ಟ್ರೋಕ್ ಆಯ್ತು. ನನ್ನ ದೇಹದ ಎಡಭಾಗ ಪೂರ್ತಿ ನಿಶ್ಚಲವಾಗಿಬಿಟ್ಟಿತ್ತು. ಎಡಬದಿಗೆ ಕಿವಿ

> ಅಪ್ಪಾಜಿ ಹೇಳುತ್ತಿದ್ದರು; 'ಹೆಂಡತಿಯಲ್ಲಿ ಬರೀ ಕಾಮ ಹುಡುಕಬೇಡ. ಅಮ್ಮನನ್ನು ಹುಡುಕು. ಅವರೊಳಗಿರುವ ತಾಯಿತನ ಒಮ್ಮೆ ಹೊರಬಂದರೆ ಬರುತ್ತಲೇ ಇರುತ್ತದೆ. ಆಮೇಲೆ ಅಲ್ಲಿಯೇ ನಿನಗೆ ಮಗಳು ಸಿಕ್ತಾಳೆ; ಸೊಸೆ ಸಿಕ್ತಾಳೆ ಕಂದಾ...' ಅವರ ಮಾತು ನನ್ನ ಬದುಕಿನಲ್ಲಿ ಅಕ್ಷರಶಃ ನಿಜವಾಗಿದೆ.

